**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಚಳ್ಳಕೆರೆ.</u>**

**<u>ಕ್ರಿಮಿನಲ್ ಮಿಸಲೇನಿಯಸ್ ನಂಃ 129/2026</u>**

**ಪಿ.ಡಬ್ಲ್ಯೂ–1**

| | | |
|---|---|---|
| ಸಾಕ್ಷಿದಾರರ ಹೆಸರು | : | ಟಿ.ಎಂ. ವಿರೇಶ್ |
| ತಂದೆಯ ಹೆಸರು | : | ಲೇಟ್ ಮಾರಯ್ಯ |
| ವಯಸ್ಸು | : | 56 ವರ್ಷ |
| ಉದ್ಯೋಗ | : | ಕೂಲಿ ಕೆಲಸ |
| ವಾಸಸ್ಥಳ | : | ಚಳ್ಳಕೆರೆ ಟೌನ್ |

ದಿನಾಂಕಃ 29.05.2026 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ</u>** ಅರ್ಜಿದಾರ ಪರ ಶ್ರೀಜೆ.ಪಿ.ಐ.ಕೀಲರಿಂದ

ನಾನು ಅರ್ಜಿದಾರನಾಗಿರುತ್ತೇನೆ. ನನ್ನ ಚಿಕ್ಕಪ್ಪ ನಷ್ಟ ಸಂತತಿಯಿಂದ ಮೃತರಾಗಿರುತ್ತಾರೆ. ನಮ್ಮ ಮೇಲೆ ಯಾವುದೇ ಸಿವಿಲ್ ದಾವೆ ಇರುವುದಿಲ್ಲ ಹಾಗೂ ನಾವು ಯಾವುದೇ ಸಿವಿಲ್ ದಾವೆ ಹೂಡಿರುವುದಿಲ್ಲ. ನನ್ನ ಚಿಕ್ಕಪ್ಪನ ಹೆಸರು ಚಳ್ಳಕೇರಪ್ಪ ಬಿನ್ ಸಣ್ಣತಿಮ್ಮಯ್ಯ. ನನ್ನ ಚಿಕ್ಕಪ್ಪನ ಮರಣ ಪ್ರಮಾಣ ಪತ್ರವು ಕುಟುಂಬದ ವಂಶವೃಕ್ಷಕ್ಕಾಗಿ ಹಾಗೂ ಸರಕಾರಿ ಸೌಲಭ್ಯವನ್ನು ಪಡೆಯಲು ಅವಶ್ಯಕತೆ ಇರುತ್ತದೆ.

ನನ್ನ ಚಿಕ್ಕಪ್ಪ ಚಳ್ಳಕೇರಪ್ಪ ಬಿನ್ ಸಣ್ಣತಿಮ್ಮಯ್ಯ ರವರು ದಿ.20.06.1996 ರಂದು ವೀರದಿಮ್ಮನಹಳ್ಳಿ ಗ್ರಾಮ, ಚಳ್ಳಕೆರೆ ತಾಲ್ಲೂಕು ನಮ್ಮ ಮನೆಯಲ್ಲಿ ತೀರಿಕೊಂಡಿರುತ್ತಾರೆ. ನಮ್ಮ ಅಜಾಗರೂಕತೆಯಿಂದ ಮತ್ತು ಕಾನೂನಿನ ತಿಳುವಳಿಕೆ ಇಲ್ಲದೇ ಇದ್ದ ಕಾರಣ ನನ್ನ ಚಿಕ್ಕಪ್ಪನ ಮರಣದ ದಿನಾಂಕವನ್ನು ಎದುರುದಾರರ ಕಛೇರಿಯಲ್ಲಿ ನೊಂದಾಯಿಸಿರುವುದಿಲ್ಲ.

ಈ ಮರಣ ಪ್ರಮಾಣ ಪತ್ರವನ್ನು ನಾನು ಯಾವುದೇ ನ್ಯಾಯಾಲಯಕ್ಕೆ ಸಲ್ಲಿಸುವುದಕ್ಕಾಗಿ ತೆಗೆದುಕೊಂಡಿರುವುದಿಲ್ಲ.

ಈ ಸಂಬಂಧವಾಗಿ ಎದುರುದಾರರ ಕಛೇರಿಯಲ್ಲಿ ಮರಣ ಪ್ರಮಾಣ ಪತ್ರವನ್ನು ಪಡೆಯಲು ಅರ್ಜಿ ಸಲ್ಲಿಸಿದಾಗ ದಿ.31.01.2026 ರಂದು ಎದುರುದಾರರ ಕಛೇರಿಯವರು ನೀಡಿರುವ ಹಿಂಬರಹವನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ.1 ಎಂದು, ವಂಶವೃಕ್ಷ ಸಂಬಂಧಪಟ್ಟಂತೆ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ.2 ಎಂದು, ನ್ಯಾಯಾಯಲದ ಆದೇಶದ ಮೇರೆಗೆ ದಿ.12-03-2026 ರಂದು ಕನ್ನಡ ಸಂಪಿಗೆ ಪತ್ರಿಕೆಯಲ್ಲಿ ಪ್ರಕಟಣೆಯನ್ನು ನಿ.ಪಿ.3 ಎಂದು ಹಾಗೂ ಪ್ರಕಟಣೆಯ ಭಾಗವನ್ನು ನಿ.ಪಿಃ3(ಎ) ಎಂದು ಗುರುತಿಸಲಾಯಿತು. ದಿ.26-02-2026 ರಂದು ಪ್ರಜಾ ಆಶಯ ಪತ್ರಿಕೆಯಲ್ಲಿ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಿದ್ದು ಅದನ್ನು ನಿ.ಪಿ.4 ಎಂದು, ಪತ್ರಿಕಾ ಪ್ರಕಟಣೆಯ ಭಾಗವನ್ನು ನಿ.ಪಿ.4(ಎ) ಎಂದು ಗುರುತಿಸಲಾಯಿತು. ಆದ್ದರಿಂದ ಅರ್ಜಿಯಲ್ಲಿ ಕೋರಿರುವ ಪ್ರಕಾರ ಆದೇಶ ಮಾಡಬೇಕಾಗಿ ಪ್ರಾರ್ಥನೆ.

**(ಎದುರುದಾರರು ಏಕಪಕ್ಷೀಯ ಆದ ಕಾರಣ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.)**

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಳ್ಳಕೆರೆ.